RNU AIR DHARWAD

# MAY 14, 2024

## ALL INDIA RADIO - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಶರಣರ ವಚನ ಸಾಹಿತ್ಯ, ಪ್ರಸ್ತುತ ಸಮಾಜಕ್ಕೆ ಆದ್ಯತೆಯಾಗಬೇಕು – ನಾಡೋಜ ಗೊ.ರು. ಚನ್ನಬಸಪ್ಪ.**
- **ವಿಧಾನ ಪರಿ ’ತ್ ಚುನಾವಣೆ; ಕಾಂಗ್ರೆಸ್ ಅಭ್ಯರ್ಥಿಗಳಿಂದ, ಪದವೀಧರರು ಹಾಗೂ ಶಿಕ್ಷಕರ ಮತಕ್ಷೇತ್ರದ ಸಮರ್ಥ ಪ್ರತಿನಿಧಿತ್ವ – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಧಾರವಾಡದಲ್ಲಿ ಇಂದಿನಿಂದ, ಮಾವು ಪ್ರದರ್ಶನ ಹಾಗೂ ಮಾರಾಟ ಮೇಳ.**
- **ಉತ್ತರ ಹಾಗೂ ದಕ್ಷಿಣ ಒಳನಾಡಿನಲ್ಲಿ, ಮುಂದಿನ ಮೂರು ದಿನ, ಭಾರೀ ಮಳೆ ಮುನ್ಸೂಚನೆ.**

<><><>

**ಈಗ ವಾರ್ತೆಗಳ ವಿವರ**

<><><>

**ಸ್ವತಂತ್ರ ಭಾರತದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ, ಶರಣರ ವಚನ ಸಾಹಿತ್ಯ, ಪ್ರಸ್ತುತ ಸಮಾಜಕ್ಕೆ ಆದ್ಯತೆಯಾಗಬೇಕು ಎಂದು, ಅಖಿಲ ಭಾರತ ಶರಣ ಸಾಹಿತ್ಯ ಪರಿ ’ತ್ತಿನ, ಗೌರವ ಸಲಹೆಗಾರ, ನಾಡೋಜ, ಗೊಂಡೇದಹಳ್ಳಿ ರುದ್ರಪ್ಪಗೌಡರು ಚನ್ನಬಸಪ್ಪ – ಗೊ.ರು.ಚ. ಅಭಿಪ್ರಾಯಪಟ್ಟರು.**

**ಕರ್ನಾಟಕ ವಿಶ್ವವಿದ್ಯಾಲಯದ ಶ್ರೀ ಬಸವೇಶ್ವರ ಪೀಠ, ಬಸವೇಶ್ವರ ಜಯಂತಿ ಅಂಗವಾಗಿ, ಸುವರ್ಣ ಮಹೋತ್ಸವ ಭವನದಲ್ಲಿ ಆಯೋಜಿಸಿದ್ದ, ‘ಬಸವಣ್ಣ ಸಾಂಸ್ಕೃತಿಕ ನಾಯಕ’ ಎಂಬ ವಿ ’ಯದ, ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಬಸವವೇಶ್ವರ ಪೀಠದ ಸುವರ್ಣ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ, ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.**

<><><>

ನಾಡೋಜ ಗೊ.ರು. ಚನ್ನಬಸಪ್ಪ ಧ್ವನಿ 60 ಸೆಕೆಂದುಗಳು

<><><>

ಸಾನ್ನಿಧ್ಯವನ್ನು, ಬೈಲೂರ ನಿ ್ಕಲ ಮಂಟಪದ, ಮುಂಡರಗಿ ತೋಂಟದಾರ್ಯ ಮಠದ ನಿಜಗುಣ ಪ್ರಭು ತೋಂಟದಾರ್ಯ ಸ್ವಾಮೀಜಿ ವಹಿಸಿದ್ದರು.

ಅಮೆರಿಕೆಯ ಡಿಕ್ಸ್ ಹಿಲ್ಸ್ ನ್ಯೂಯಾರ್ಕನ, ರವಿಶಂಕರ ಭೋಪಳಾಪುರ, ಆನ್ ಲೈನ್‌ನಲ್ಲಿ ಕಾರ್ಯಕ್ರಮ ಉದ್ಘಾಟಿಸಿದರು.

ಉತ್ತರ ಅಮೆರಿಕೆಯ ಬಸವ ಕೇಂದ್ರದ ಮುಖ್ಯಸ್ಥ, ಡಾಕ್ಟರ್ ಸ್ಟೀವ್ ರೋಚ್, ಆನ್ ಲೈನ್‌ನಲ್ಲಿ ಪಾಲ್ಗೊಂಡು, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವದ ಕಲ್ಪನೆಯನ್ನು ಬಸವೇಶ್ವರರು ನೀಡಿದ್ದಾರೆ ಎಂದರು.

ಕುಲಪತಿ ಪ್ರೊಫೆಸರ್ ಕೆ.ಬಿ.ಗುಡಸಿ ಅಧ್ಯಕ್ಷತೆ ವಹಿಸಿದ್ದರು.

<><><>

ರಾಜ್ಯ ವಿಧಾನ ಪರಿಷತ್ತಿಗೆ, ಈಶಾನ್ಯ, ನೈರುತ್ಯ, ಬೆಂಗಳೂರು ಪದವೀಧರ, ಆಗ್ನೇಯ, ನೈಋುತ್ಯ ಮತ್ತು ದಕ್ಷಿಣ ಶಿಕ್ಷಕರ 6 ಸ್ಥಾನಗಳಿಗೆ, ಜೂನ್ 3 ರಂದು ಚುನಾವಣೆ ನಡೆಯಲಿದೆ. ನಾಡಿದ್ದು ಗುರುವಾರ ನಾಮಪತ್ರ ಸಲ್ಲಿಸಲು ಕೊನೆಯ ದಿನ. 17 ರಂದು ಶುಕ್ರವಾರ ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ವಾಪಸ್ ಪಡೆಯಲು, ಇದೇ 20 ಸೋಮವಾರ ಕೊನೆಯ ದಿನ. ಜೂನ್ 3 ರಂದು, ಸೋಮವಾರ ಮತದಾನ ನಡೆಯಲಿದೆ. ಜೂನ್ 6, ಗುರುವಾರದಂದು ಮತ ಎಣಿಕೆ ಹಾಗೂ ಫಲಿತಾಂಶ ಪ್ರಕಟವಾಗಲಿದೆ.

<><><>

ವಿಧಾನಪರಿ ’ತ್ ಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳು ಸಮರ್ಥವಾಗಿ, ಶಿಕ್ಷಕರ ದನಿಯಾಗಿ ಕೆಲಸ ಮಾಡಲಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತ ಪಡಿಸಿದ್ದಾರೆ. ವಿಧಾನ ಪರಿ ’ತ್ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳಾದ, ರಾಮೋಜಿ ಗೌಡ ಮತ್ತು ಶ್ರೀನಿವಾಸ, ಬೆಂಗಳೂರಿನಲ್ಲಿ ನಾಮಪತ್ರ ಸಲ್ಲಿಸಿದ ಸಂದರ್ಭದಲ್ಲಿ, ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

<><><>

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ವಿಧಾನಪರಿ ’ತ್ ಚುನಾವಣೆಯಲ್ಲಿ ಸಮರ್ಥರನ್ನು ಪಕ್ಷ ಕಣಕ್ಕಿಳಿಸಿದೆ ಎಂದರು.

<><><>

ಬೆಂಗಳೂರು ಪದವೀಧರ ಕ್ಷೇತ್ರದಿಂದ ರಾಮೋಜಿಗೌಡ, ಈಶಾನ್ಯ ಪದವೀಧರ ಮತಕ್ಷೇತ್ರದಿಂದ ಚಂದ್ರಶೇಖರ ಪಾಟೀಲ್, ನೈಋುತ್ಯ ಪದವೀಧರ ಮತಕ್ಷೇತ್ರದಿಂದ ಆಯನೂರು ಮಂಜುನಾಥ್, ನೈಋುತ್ಯ ಶಿಕ್ಷಕರ ಮತಕ್ಷೇತ್ರದಿಂದ ಕೆ.ಕೆ.ಮಂಜುನಾಥ್, ಆಗ್ನೇಯ ಶಿಕ್ಷಕರ ಮತಕ್ಷೇತ್ರದಿಂದ, ಡಿ.ಟಿ.ಶ್ರೀನಿವಾಸ್ ಮತ್ತು ದಕ್ಷಿಣ ಶಿಕ್ಷಕರ ಮತಕ್ಷೇತ್ರದಿಂದ ಮರಿತಿಬ್ಬೇಗೌಡ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ.

<><><>

ಈಶಾನ್ಯ ಪದವೀಧರ ಮತಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ಅಮರನಾಥ ಪಾಟೀಲ್, ನೈಋತ್ಯ ಪದವೀಧರ ಮತಕ್ಷೇತ್ರದಿಂದ ಡಾಕ್ಟರ್ ಧನಂಜಯ್ ಸರ್ಜಿ, ಬೆಂಗಳೂರಿನಿಂದ ಎ.ದೇವೇಗೌಡರು, ಆಗ್ನೇಯ ಶಿಕ್ಷಕರ ಮತಕ್ಷೇತ್ರದಿಂದ ವೈ.ಎ.ನಾರಾಯಣಸ್ವಾಮಿ ಮತ್ತು ದಕ್ಷಿಣ ಶಿಕ್ಷಕ ಮತಕ್ಷೇತ್ರದಿಂದ, ಇ.ಸಿ.ನಿಂಗರಾಜು ಕಣದಲ್ಲಿದ್ದಾರೆ.

<><><>

ಪ್ರತಿ ಪಕ್ಷ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಮೈತ್ರಿ ಮಾಡಿಕೊಂಡಿದ್ದು, ಬಿಜೆಪಿ ಐದು ಕ್ಷೇತ್ರಗಳಲ್ಲಿ ಮತ್ತು ಜೆಡಿಎಸ್ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದೆ.

<><><>

ನೈಋತ್ಯ ಶಿಕ್ಷಕರ ಮತ ಕ್ಷೇತ್ರದಿಂದ, ಬಿಜೆಪಿ-ಜೆಡಿಎಸ್‌ಗೆ ಅಭ್ಯರ್ಥಿಯಾಗಿ, ಎಸ್.ಎಲ್.ಬೋಜೇಗೌಡ, ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಧಾರವಾಡ ಜಿಲ್ಲಾಡಳಿತ, ಧಾರವಾಡ ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ, ಇಂದಿನಿಂದ ಮೂರು ದಿನಗಳ 'ಮಾವು ಪ್ರದರ್ಶನ ಹಾಗೂ ಮಾರಾಟ ಮೇಳ' ಆಯೋಜಿಸಿದೆ.

ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲೆ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕಾಶೀನಾಥ ಭದ್ರಣ್ಣವರ.

<><><>

ಕಾಶೀನಾಥ ಭದ್ರಣ್ಣವರ ಧ್ವನಿ 30 ಸೆಕೆಂದುಗಳು

<><><>

ಧಾರವಾಡ ಜಿಲ್ಲೆಯಲ್ಲಿ ಈಗಾಗಲೇ ಹತ್ತು ಹಂತಗಳಲ್ಲಿ, ಒಂದು ಲಕ್ಷ 6 ಸಾವಿರದ 707 ರೈತರಿಗೆ, 108 ಕೋಟಿ 12 ಲಕ್ಷ ರೂಪಾಯಿಗಳ, ಇನ್‌ಪುಟ್ ಸಬ್ಸಿಡಿ ಬಿಡುಗಡೆ ಮಾಡಲಾಗಿದೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು, ತಿಳಿಸಿದ್ದಾರೆ. 2023ನೇ ಸಾಲಿನ, ಮುಂಗಾರು ಹಂಗಾಮಿನಲ್ಲಿ ಉಂಟಾದ ಬರ ಪರಿಸ್ಥಿತಿಗೆ ಪರಿಹಾರವಾಗಿ, ರಾಜ್ಯ ವಿಪತ್ತು ಪರಿಹಾರ ನಿರ್ವಹಣಾ ನಿಧಿ ಅಡಿ, ಬೆಳೆ ಹಾನಿ ಪರಿಹಾರವನ್ನು ಅರ್ಹ ರೈತರಿಗೆ, ಗರಿಷ್ಟ 2 ಸಾವಿರ ರೂಪಾಯಿಗಳ ವರೆಗೆ ಪಾವತಿಸಲಾಗಿದೆ ಎಂದು ಅವರು, ಹೇಳಿದ್ದಾರೆ. ಫ್ರುಟ್ಸ್ ಐಡಿ ಹೊಂದಿರುವ ರೈತರಿಗೆ, ಪರಿಹಾರ ತಂತ್ರಾಂಶದ ಮೂಲಕ, ಹಂತ-ಹಂತವಾಗಿ ಪರಿಹಾರ ವಿತರಿಸಲಾಗುತ್ತಿದೆ. ಬೆಳೆ ಹಾನಿ ಪರಿಹಾರ ಪಡೆದುಕೊಳ್ಳಲು ಫ್ರುಟ್ಸ್ ಐಡಿ ಕಡ್ಡಾಯವಾಗಿದೆ. ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ, ರೈತರು ಫ್ರುಟ್ಸ್ ಐಡಿ ಸೃಜಿಸಿಕೊಳ್ಳಬಹುದು ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ಮಾಹಿತಿ ನೀಡಿದ್ದಾರೆ.

<><><>

ಸೋಮವಾರದಿಂದ ಗುರುವಾರದ ವರೆಗೆ, ಉತ್ತರ ಒಳನಾಡು ಜಿಲ್ಲೆಗಳಲ್ಲಿ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ, ಗುಡುಗು ಮಿಂಚು ಸಹಿತ, ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

<><><>

ಕೋಲಾರ ತಾಲೂಕು, ಬೇತಮಂಗಲ ರಸ್ತೆಯ, ಜಂಗಮ ಬಸಾಪುರ ಗ್ರಾಮದ ಬಸವರಾಜು ಅವರ ಮೂರು ಎಕರೆ ಬಾಳೆ ಬೆಳೆ, ಸತತ ಮಳೆಗೆ ಗೊನೆ ಸಮೇತ ಸಂಪೂರ್ಣ ನೆಲಕಚ್ಚಿ, ಲಕ್ಷಾಂತರ ರೂಪಾಯಿ ನಷ್ಟವಾಗಿದೆ.

<><><>

ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲೂಕಿನ ಡಿ.ಮರಿಕುಂಟೆಯಲ್ಲಿ 51 ದಶಾಂಶ 6 ಮಿಲ್ಲಿ ಮೀಟರ್, ಜಿಲ್ಲೆಯಲ್ಲಿ ಈ ವರೆಗೆ ಸುರಿದ ಅತ್ಯಧಿಕ ಪ್ರಮಾಣದ ಮಳೆಯಾಗಿದೆ.

<><><>

ಯಾದಗಿರಿ ಜಿಲ್ಲೆ ಶಹಾಪುರ ತಾಲೂಕಿನ, ವಿಭೂತಿಹಳ್ಳಿ ಗ್ರಾಮದಲ್ಲಿ, ಸಿಡಿಲು ಬಡಿದು 22 ವರ್ಷದ ಕುರಿಗಾಹಿ ಗೋವಿಂದಪ್ಪ ಹಾಗೂ 7 ಕುರಿಗಳು ಮೃತಪಟ್ಟಿವೆ.

<><><>

ದಕ್ಷಿಣಕನ್ನಡ ಜಿಲ್ಲೆಯ, ಸುಬ್ರಹ್ಮಣ್ಯ, ಸುಳ್ಯ, ಕಡಬ, ಉಪ್ಪಿನಂಗಡಿ ಹಾಗೂ ಬಂಟ್ವಾಳ ಸೇರಿದಂತೆ, ಹಲವೆಡೆ ಕಳೆದೆರಡು ದಿಗಳಲ್ಲಿ, ಭಾರೀ ಮಳೆಯಾಗಿದೆ.

<><><>

ಬೇಸಿಗೆ ರಜೆ ಕಳೆಯಲೆಂದು, ಅಜ್ಜಿಯ ಮಮನೆಗೆ ಬಂದು, ವಿಜಯಪುರ ನಗರದಲ್ಲಿ ಭಾನುವಾರ ಕಾಣೆಯಾಗಿದ್ದ ಮೂವರು ಮಕ್ಕಳು, ಇಂಡಿ ರಸ್ತೆಯ ಒಳಚರಂಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ನೀರಿನಲ್ಲಿ ಸೋಮವಾರ ಶವವಾಗಿ ಪತ್ತೆಯಾಗಿದ್ದಾರೆ. 9 ವರ್ಷದ ಅನುಷ್ಕಾ ಹಾಗೂ 7 ವರ್ಷದ ವಿಜಯ್ ಗದಗ್‌ನವರಾಗಿದ್ದು, 7 ವರ್ಷದ ಮಿಹಿರ್ ಜಾನಗೌಳಿ ವಿಜಯಪುರದವರಾಗಿದ್ದಾರೆ.

<><><>

ಧಾರವಾಡ ಜಿಲ್ಲೆ ಅಳ್ನಾವರದ ಗ್ರಾಮದೇವಿ ಜಾತ್ರಾ ಮಹೋತ್ಸವದ ಪ್ರಯುಕ್ತ ನಡೆದ, ಅಂತಾರಾಷ್ಟ್ರೀಯ ಮಟ್ಟದ ಹೊನಲು ಬೆಳಕಿನ ಮುಕ್ತ ಕುಸ್ತಿ ಟೂರ್ನಿಯ ಪುರುಷರ ವಿಭಾಗದಲ್ಲಿ ಇರಾನ್‌ನ ಮಿರ್ಜಾ ಖಾನ್ ಹಾಗೂ ಮಹಿಳೆಯರ ವಿಭಾಗದಲ್ಲಿ ಉತ್ತರ ಕನ್ನಡ ಜಿಲ್ಲೆಯ ಎಡೋಗಾದ ಗಾಯತ್ರಿ ಸುತಾರ್ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದಾರೆ.

<><><>

ಧಾರವಾಡದ ಪ್ರಸಿದ್ಧ ಆಯುರ್ವೇದ ತಜ್ಞ, ಪ್ರಾಧ್ಯಾಪಕ  ಡಾಕ್ಟರ್ ಮಹಾಂತಸ್ವಾಮಿ ಹಿರೇಮಠ ಅವರಿಗೆ, ಬೆಳಗಾವಿ ಕೆ.ಎಲ್.ಇ.  ವಿಶ್ವವಿದ್ಯಾಲಯ, ಬಿ.ಎಂ. ಕಂಕಣವಾಡಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘ ಕೊಡಮಾಡುವ, 'ಚಿಕಿತ್ಸಾ ವೈಶಿಷ್ಟ್ಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಇಂದು, ರಾಷ್ಟ್ರೀಯ ಸಭ್ಯತಾ ದಿನ.

<><><>

ಮಂಡ್ಯ ಜಿಲ್ಲೆ ಪಾಂಡವಪುರದಲ್ಲಿ ಪತ್ತೆಯಾದ, ಹೆಣ್ಣು ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಈ ವರೆಗೆ ಒಟ್ಟು 9 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು, ಮಂಡ್ಯ ಜಿಲ್ಲಾ ಪೊಲೀಸರು ತಿಳಿಸಿದ್ದಾರೆ.

<><><>

ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನ, ಇಂದು ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿದೆ ಎಂದು, ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ.

<><><>

ಕೇಂದ್ರೀಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಸಿ.ಬಿ.ಎಸ್.ಇ.ಯ 12ನೇ ತರಗತಿ ಫಲಿತಾಂಶ ಪ್ರಕಟವಾಗಿದ್ದು, ಒಟ್ಟಾರೆ ಶೇಕಡ 87 ದಶಾಂಶ 9–8ರ ್ಟ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

<><><>

ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ, ಶ್ರವಣ ಸಾಧನಗಳ ವಿತರಣೆ ಕಾರ್ಯಕ್ರಮ, ಕೆನರಾ ಬ್ಯಾಂಕ್ ವ್ಯವಸ್ಥಾಪಕ ಡಿ.ಆರ್.ಪ್ರಭು ಉದ್ಘಾಟಿಸಿದರು.

<><><>

ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾದೆಮಿ, ‘ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳಲ್ಲಿ, ಮಾಹಿತಿ, ಸಂವಹನ ಮತ್ತು ತರಬೇತಿಯ ಪಾತ್ರ’ ಎಂಬ ವಿಷಯವಾಗಿ, ಬೆಂಗಳೂರಿನಲ್ಲಿ, ನಾಳೆಯಿಂದ ರಿಂದ 24ರ ವರೆಗೆ, ಹತ್ತು ದಿನಗಳ ತರಬೇತಿ ಕಾರ್ಯಾಗಾರ ಆಯೋಜಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಶರಣರ ವಚನ ಸಾಹಿತ್ಯ, ಪ್ರಸ್ತುತ ಸಮಾಜಕ್ಕೆ ಆದ್ಯತೆಯಾಗಬೇಕು – ನಾಡೋಜ ಗೊ.ರು. ಚನ್ನಬಸಪ್ಪ.
- ವಿಧಾನ ಪರಿ ‘ತ್ ಚುನಾವಣೆ; ಕಾಂಗ್ರೆಸ್ ಅಭ್ಯರ್ಥಿಗಳಿಂದ, ಪದವೀಧರರು ಹಾಗೂ ಶಿಕ್ಷಕರ ಮತಕ್ಷೇತ್ರದ ಸಮರ್ಥ ಪ್ರತಿನಿಧಿತ್ವ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಧಾರವಾಡದಲ್ಲಿ ಇಂದಿನಿಂದ, ಮಾವು ಪ್ರದರ್ಶನ ಹಾಗೂ ಮಾರಾಟ ಮೇಳ.
- ಉತ್ತರ ಹಾಗೂ ದಕ್ಷಿಣ ಒಳನಾಡಿನಲ್ಲಿ, ಮುಂದಿನ ಮೂರು ದಿನ, ಭಾರೀ ಮಳೆ ಮುನ್ಸೂಚನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>